# ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ

ಹರಳಕುಂಟೆ, ಹೊಸೂರು ರಸ್ತೆ, ಬೆಂಗಳೂರು – ೫೬೦ ೦೬೮. ದೂ:೨೫೭೩೦೬೪೯/೨೫೭೩೨೨೬೫ ಇ-ಮೈಲ್: ಎಂಡಿಕೆಸಿಡಿಸಿ@ಜಿಮೇಲ್.ಕಾಮ್

**KARNATAKA COMPOST DEVELOPMENT CORPORATION LTD.**

Haralakunte, Hosur Road, Bangalore - 560 068. Ph: 25730649 / 25732265 E-mail: mdkcdc@gmail.com

ಕೆಸಿಡಿಸಿ/ಬಿಬಿಎಂಪಿ/022/2020–21 ದಿನಾಂಕ : 29.05.2020

ಗೆ,

ನಿರ್ದೇಶಕರು

ಕೃಷಿ ಇಲಾಖೆ,

ಶೇಷಾದ್ರಿ ರಸ್ತೆ,

ಬೆಂಗಳೂರು

ಮಾನ್ಯರೇ,

ವಿಷಯ: ಕೃಷಿ ಇಲಾಖೆಯ ಅಂತರ್ಜಾಲದಲ್ಲಿ ಸಿಟಿ ಕಾಂಪೋಸ್ಟ್ ಗೊಬ್ಬರದ ಮಾರಾಟ ಮಾಹಿತಿಯನ್ನು ಪ್ರಕಟಿಸುವ ಕುರಿತು

ಉಲ್ಲೇಖ: ದಿನಾಂಕ 30.12.2019ರಂದು ನಡೆದ ಕೆಸಿಡಿಸಿ 188ನೇ ಮಂಡಳಿ ಸಭೆಯ ತೀರ್ಮಾನದಂತೆ

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಮಗವು ಮಾರಾಟ ಮಾಡುವ ಸಿಟಿ ಕಾಂಪೋಸ್ಟ್ ಗೊಬ್ಬರದ ಮಾಹಿತಿಯನ್ನು ಕೃಷಿ ಇಲಾಖೆಯ ಅಂರ್ತಜಾಲದಲ್ಲಿ ಪ್ರಕಟಿಸಲು ದಿನಾಂಕ 30.12.2019 ರಂದು ಮಾನ್ಯ ವಿಶೇಷ ಆಯುಕ್ತರು(ಘ.ತ್ಯಾ.ನಿ) ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ನಡೆದ ಕೆಸಿಡಿಸಿ 188ನೇ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ. ಆದ್ದರಿಂದ ಈ ಪತ್ರದಲ್ಲಿ ಲಗತ್ತಿಸಿರುವ ಕರಪತ್ರವನ್ನು ಅಂತರ್ಜಾಲದಲ್ಲಿ ಪ್ರಕಟಿಸಲು ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಈ ಮೂಲಕ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಎಂ.ರಾಮಕೃಷ್ಣ)

ವ್ಯವಸ್ಥಾಪಕ ನಿರ್ದೇಶಕರು

ಕೆಸಿಡಿಸಿ ನಿಗಮ

ಪ್ರತಿಯನ್ನು:

1. ಮಾನ್ಯ ವಿಶೇಷ ಆಯುಕ್ತರು(ಘತ್ಯಾನಿ) ಬಿಬಿಎಂಪಿ, ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಉಪ ಕೃಷಿ ನಿರ್ದೇಶಕರು (ಪರಿಕರಗಳು), ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಮಾಹಿತಿ ತಂತ್ರಜ್ಞಾನ ವಿಭಾಗ, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

# ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಳಾಸ: ಹರಳಕುಂಟೆ, ಹೊಸೂರು ರಸ್ತೆ, ಮಡಿವಾಳ ಅಂಚೆ, ಬೆಂಗಳೂರು-560068

ಫೋನ್ : 25730649/25732265

B.B.M.P

ಇ-ಮೇಲ್: mdkcdc@gmail.com, Website : www.kcdc.in


ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಬಾಗಿತ್ವದಲ್ಲಿ ನಗರದ ಮನೆಗಳಿಂದ ಉತ್ಪತ್ತಿಯಾಗುತ್ತಿರುವ ಘನ ತ್ಯಾಜ್ಯದಿಂದ ಹಸಿ ತ್ಯಾಜ್ಯವನ್ನು ಬೇರ್ಪಡಿಸಿ, ವೈಜ್ಞಾನಿಕವಾಗಿ ಸಂಸ್ಕರಿಸಿ ಅಪ್ಪಟ ಸಾವಯವ ಗೊಬ್ಬರವಾಗಿ ಪರಿವರ್ತಿಸಲಾಗುತ್ತಿದೆ, ರಾಸಾಯನಿಕ ಗೊಬ್ಬರದ ಬಳಕೆಯಿಂದಾಗಿ ಇತ್ತಿಚಿನ ದಿನಗಳಲ್ಲಿ ಕೃಷಿ ಭೂಮಿಯು ಕಲುಷಿತಗೊಂಡು ಬೆಳೆ ಮತ್ತು ಆರೋಗ್ಯದ ಮೇಲೆ ದುಷ್ಪಾರಿಣಾಮ ಬೀರುತ್ತಿರುವುದನ್ನು ಮನಗೊಂಡು ಸರ್ಕಾರವು ಸಾವಯವ ಗೊಬ್ಬರದ ಬಳಕೆಯನ್ನು ಉತ್ತೇಜಿಸಲು ರೈತರಿಗೆ ಅತೀ ಕಡಿಮೆ ದರದಲ್ಲಿ ಕೃಷಿ ಇಲಾಖೆಯ ಮುಖಾಂತರ ನೇರವಾಗಿ ರೈತರ ಜಮೀನಿಗೆ ಸಾವಯವ ಗೊಬ್ಬರವನ್ನು ಸರಬರಾಜು ಮಾಡಲಾಗುತ್ತಿದೆ. ರೈತರು ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ.

**ಸಿಟಿ ಕಾಂಪೋಸ್ಟ್ - ಅಪ್ಪಟ ಸಾವಯವ ಗೊಬ್ಬರದಲ್ಲಿ ಹೊಂದಿರುವ ಪೋಷಕಾಂಶಗಳು :**

ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಶೇಕಡ 1.2 ಕ್ಕಿಂತ ಹೆಚ್ಚಾಗಿರುತ್ತದೆ.

ಸಾವಯವ ಇಂಗಾಲ ಶೇಕಡ 12.0 ಕ್ಕಿಂತ ಹೆಚ್ಚಾಗಿರುತ್ತದೆ.

ಮತ್ತು ಲಘು ಪೋಷಕಾಂಶಗಳು ಹಾಗೂ ಉಪಯುಕ್ತ ಸೂಕ್ಷ್ಮಾಣುಗಳು.

**ಸಾವಯವ ಗೊಬ್ಬರದ ಪ್ರಾಮುಖ್ಯತೆ :**

1. ಮಣ್ಣಿನ ಕಣಗಳ ರಚನೆಯಲ್ಲಿ ಸಾಂದ್ರತೆ ಕಡಿಮೆಯಾಗಿರುವುದರಿಂದ ಹಾಗೂ ಗಾಳಿಯ ಸಂಚಾರ ಹೆಚ್ಚಿಸಲು ಸಾವಯವ ಗೊಬ್ಬರದ ಉಪಯೋಗ ಪ್ರಮುಖ ಪಾತ್ರವಹಿಸುತ್ತದೆ.
2. ಯಾವುದೇ ರಾಸಾಯನಿಕ ಕ್ರಿಯೆಯಿಂದ ಮಣ್ಣಿನಲ್ಲಿ ರಾಸಾಯನಿಕ ಗುಣವಿಶೇಷವು ಹೆಚ್ಚು ಬದಲಾಗದಂತೆ ಒಂದು ರೀತಿಯ ಸ್ಥಿರತೆಯ ಶಕ್ತಿಯನ್ನು ಮಣ್ಣಿಗೆ ತಂದು ಕೊಡುತ್ತದೆ.
3. ಮಣ್ಣಿನಲ್ಲಿ ತೇವಾಂಶ ಹಿಡಿದಿಡುವ ಶಕ್ತಿ ಹೆಚ್ಚುತ್ತದೆ.
4. ಬೆಳೆಗಳಿಗೆ ಅವಶ್ಯವಿರುವ ಪೋಷಕಾಂಶಗಳು ದೊರೆಯುತ್ತವೆ.
5. ಮಣ್ಣಿನಲ್ಲಿ ಸಾವಯವ ವಸ್ತುವಿನ ಪರಿಮಾಣ ಹೆಚ್ಚುತ್ತದೆ.
6. ಸಾವಯವ ಗೊಬ್ಬರದಲ್ಲಿ ಪೋಷಕಾಂಶಗಳು ನಿಧಾನವಾಗಿ ಬಿಡುಗಡೆಯಾಗುವುದರಿಂದ ಪೋಷಕಾಂಶಗಳು ನಷ್ಟವಾಗುವುದು ತಪ್ಪುತ್ತದೆ.
7. ಸಾವಯವ ಗೊಬ್ಬರ ಮಣ್ಣಿನಲ್ಲಿ ಇರುವಾಗ ಸೂಕ್ಷ್ಮಾಣುಗಳ ಕ್ರಿಯೆ ನಿರಂತರವಾಗಿ ನಡೆಯುವುದರಿಂದ ಮಣ್ಣಿನ ಗುಣಮಟ್ಟ ಹೆಚ್ಚುತ್ತದೆ.

8. ಗಾಳಿ ಮತ್ತು ನೀರಿನ ಸವಕಳಿಗೆ ತುತ್ತಾಗುವುದನ್ನು ಕಡಿಮೆ ಮಾಡುತ್ತದೆ.

9. ಮಣ್ಣಿನ ರಸಸಾರ ಮಟ್ಟವನ್ನು ಸಮತೋಲನದಲ್ಲಿಡುತ್ತದೆ.

10. ಮಣ್ಣಿನ ಆರೋಗ್ಯವನ್ನು ಕಾಪಾಡುತ್ತದೆ.

11. ಸತತವಾಗಿ ಸಾವಯವ ಗೊಬ್ಬರ ಉಪಯೋಗಿಸಿದ್ದಲ್ಲಿ, ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಬಹುದಾಗಿರುತ್ತದೆ.

12. ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರದ ಬಳಕೆಯಿಂದ ಮನುಷ್ಯನ ಆರೋಗ್ಯದ ಮೇಲೆ ನೇರವಾಗಿ ದುಷ್ಪಾರಿಣಾಮ ಬೀರುತ್ತಿದ್ದು, ಸಾವಯವ ಗೊಬ್ಬರದ ಉಪಯೋಗದಿಂದ ಅದನ್ನು ತಡೆಗಟ್ಟಬಹುದಾಗಿರುತ್ತದೆ.

**ಬಳಸುವ ಪ್ರಮಾಣ:**

| | | |
|---|---|---|
| 1. | ಕೃಷಿ ಬೆಳೆಗಳಾದ ರಾಗಿ, ಜೋಳ, ಗೋಧಿ, ಸಜ್ಜೆ ಮೆಕ್ಕೆಜೋಳ, ಸೂರ್ಯಕಾಂತಿ, ಆಲೂಗಡ್ಡೆ ಮೆಣಸಿನ ಕಾಯಿ, ಕಬ್ಬು ತಂಬಾಕು, ಹತ್ತಿ ಹಿಪ್ಪುನೇರಳೆ, ಭತ್ತ ಮತ್ತು ಶುಂಠಿ | 1.0 ಮೆ. ಟನ್ / ಪ್ರತಿ ಎಕರೆಗೆ |
| 2. | ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ, ತೆಂಗು, ಮಾವು, ಸೀಬೆ, ನಿಂಬೆ, ಸಪೋಟ, ಬಾಳೆ ಗಿಡಗಳಿಗೆ | 10 ಕೆ.ಜಿ / ಪ್ರತಿ ಗಿಡಕ್ಕೆ |
| 3. | ಕುಂಬಳ ಜಾತಿಯ ಕಾಯಿಗಳು, ಬದನೆ, ಬೆಂಡೆ, ಎಲೆಕೋಸು, ಹೂಕೋಸು ಮತ್ತು ಇತರೆ | 0.5 ಕೆ.ಜಿ / ಪ್ರತಿ ಚ. ಮೀಟರ್ ಗೆ |
| 4. | ಪ್ಲಾಂಟೇಶನ್ ಬೆಳೆಗಳಾದ ರಬ್ಬರ್, ಅಡಿಕೆ, ಗೋಡಂಬಿಗಳಿಗೆ | 1.0 ಕೆ.ಜಿ / ಪ್ರತಿ ಚ. ಮೀಟರ್ ಗೆ |
| 5. | ಅಲಂಕಾರಿಕ ಸಸ್ಯಗಳಿಗೆ. | 1.0 ಕೆ.ಜಿ / ಪ್ರತಿ ಚ. ಮೀಟರ್ ಗೆ |

**ದರಪಟ್ಟಿ:**

**ಕೃಷಿ ಇಲಾಖೆಯ ಮುಖಾಂತರ ರೈತರಿಗೆ**

| ಸಿಟಿ ಕಾಂಪೋಸ್ಟ್ ದರ (ರೂ. ಪ್ರತಿ ಟನ್‌ಗೆ) | ಸರ್ಕಾರದ ಸಹಾಯಧನ (ರೂ. ಪ್ರತಿ ಟನ್‌ಗೆ) | ಕೆಸಿಡಿಸಿ ಮೂಲಕ ರೈತರ ಜಮೀನಿಗೆ ಸಾಗಿಸಿದರೆ ರೈತರು ಪಾವತಿಸಬೇಕಾದ ದರ (ರೂ. ಪ್ರತಿ ಟನ್‌ಗೆ) | ರೈತರೇ ನೇರವಾಗಿ ಗೊಬ್ಬರವನ್ನು ಘಟಕದಿಂದ ಸಾಗಿಸಿಕೊಂಡಲ್ಲಿ ರೈತರು ಪಾವತಿಸಬೇಕಾದ ದರ (ರೂ. ಪ್ರತಿ ಟನ್‌ಗೆ) |
|---|---|---|---|
| 2,200/- | 1,100/- | 1,100/- | 200/- |

**ಕೆ.ಸಿ.ಡಿ.ಸಿ. ಯಿಂದ ನೇರವಾಗಿ ಖರೀದಿಸುವ ದರ : ರೂ. 2,520/-ಪ್ರತಿ ಟನ್‌ಗೆ**